ಅಷ್ಟೆ ಎಂದುಕೊಂಡಿದ್ದ ನಾಗರಾಜರಿಗೆ ಒಮ್ಮೆ ಚಿಕ್ಕಮಗಳೂರಿನಲ್ಲಿ 'ದಪ್ಪಗಾಜಿನ ಕನ್ನಡಕ ತೊಟ್ಟ' ಒಬ್ಬ ಹುಡುಗ ತಗುಲಿಕೊಂಡನಂತೆ. ಅವರಿಬ್ಬರ ನಡುವೆ ನಡೆದ ಮಾತುಕತೆ ಇದು:

'ಸರ್ ನಮ್ಮಪ್ಪ ಹೇಳುತಾರೆ ನೀವೂ ಅವರೂ ಕಸಿನ್ಸ್ ಆಗಬೇಕಂತೆ... ನಮ್ಮ ಮನೆಯ ವಂಶವೃಕ್ಷದಲ್ಲಿ ನಿಮ್ಮ ತಂದೆಯವರೆಗಿನ ದಾಖಲೆ ಇದೆ... ಅಂದ ಹಾಗೆ ನಿಮ್ಮ ಗೋತ್ರ?'

'ಕಾಮಕಾಯನ ವಿಶ್ವಾಮಿತ್ರ...'

'ಅಲ್ಲವಾ ಮತ್ತೆ, ನಮ್ಮದೂ ಅದೇ... ನಮ್ಮದೂ ಬೋಧಾಯನ ಸೂತ್ರವೇನೇ. ಮನೆ ದೇವರು?'

'ಸುಬ್ರಹ್ಮಣ್ಯ, ಕುಕ್ಕೆ...'

'ಅಂದುಕೊಂಡೆ, ಅದೇ ಆಗಿರಬೇಕೂಂತ. ನಮ್ಮದೂ ಅದೇನೆ...! ಸಾರ್, ಇನ್ನೊಂದು ವಿಷಯ ಹೇಳಲಾ? ನಾನು ಈ ಊರಿನಲ್ಲಿ ಜರ್ನಲಿಸ್ಟು. ಲೋಕಲ್ ಪೇಪರಿಗೆಲ್ಲ ಬರೀತೀನಿ. ಇಲ್ಲೆಲ್ಲರಿಗೂ ನಾನೂ, ನೀವೂ ಒಂದೇ ಅಂತ ಹೇಳಿಕೊಂಡಿದೀನಿ...!!'

'ಹೌದಾ? ಸಂತೋಷ. ನಿಮ್ಮ ಹೆಸರು?'

'ನಾಗರಾಜ ವಸ್ತಾರೆ ಅಂತ ಸಾರ್!!'

ಈ ಉತ್ತರ ಕೇಳಿ ನಮ್ಮ ನಾಗರಾಜ ವಸ್ತಾರೆಯವರಿಗೆ ಕಂಗಾಲಾಯಿತು – ಒಂದೇ ಹೆಸರಿರುವ ನಮ್ಮಿಬ್ಬರಲ್ಲಿ ಯಾರು ಅಥೆಂಟಿಕ್ ಎಂದು.



ತ್ರಿವೇಣಿ

ಒಂದೇ ಹೆಸರಿರುವ ಇಬ್ಬರು ಇರಬಹುದು; 'ಒಬ್ಬರ ವಿಳಾಸದಲಿ ಇನ್ನೊಬ್ಬರಿರಬಹುದು', ಸರಿ. ಆದರೆ ಇಬ್ಬರಲ್ಲೊಬ್ಬ ಸತ್ತ ಸುದ್ದಿ ಬದುಕಿರುವವನಿಗೆ ಗೊತ್ತಾದರೆ? ಕೆ.ಎಸ್. ನರಸಿಂಹಸ್ವಾಮಿಯವರ 'ತೆರೆದ ಬಾಗಿಲು' ಅಂಥವನೊಬ್ಬನ ತಳಮಳವನ್ನು ಚಿತ್ರಿಸುವ ಕವನ. ಇಲ್ಲಿನ ನಾಯಕ ತನ್ನ ಹೆಂಡತಿಯ ಊರಿಂದ ಬಂದವನೊಬ್ಬನ ಜೊತೆ ಆತ್ಮೀಯವಾಗಿ ಮಾತಾಡುತ್ತ, ಊರಿಂದ ಇನ್ನೂ ಬಂದಿರದ ತನ್ನ ಹೆಂಡತಿಯ ಬಗ್ಗೆ, ತಾನು ಮಾಡಬೇಕಿರುವ ತನ್ನ ತಂದೆಯ ಶ್ರಾದ್ಧದ ಬಗ್ಗೆ, ಪತ್ರಿಕೆಯಲ್ಲಿ ತನ್ನ ಹೆಸರಿನವನೊಬ್ಬನೇ ಸತ್ತಿರುವ ಸುದ್ದಿಯ ಬಗ್ಗೆ, ಅವನು ತಾನಲ್ಲ ಎಂದು ಪತ್ರಿಕೆಯ ಸಂಪಾದಕರಿಗೆ ಫೋನು ಮಾಡಿದ ಬಗ್ಗೆ, ಯಾರ ಶ್ರಾದ್ಧಕ್ಕೋ ಹೊರಟ 'ಮಡಿಯುಟ್ಟ ಹಸಿದ ಮೂವರು' ತನ್ನ ಮನೆಗೇ ತನ್ನನ್ನು ಹರಸಿಹೋದ ಬಗ್ಗೆ ನೀಡುವ ವಿವರಗಳೆಲ್ಲವೂ ಸಾವಿನ ದುರಂತವನ್ನು ಹೇಗೋ ಹಾಗೆ ಸಾವಿನ ಪರಿಹಾಸವನ್ನೂ ಮನವರಿಕೆಮಾಡಿಕೊಡುತ್ತವೆ. ವಿವಿಧ ಸ್ತರಗಳಲ್ಲಿ ಅರ್ಥ ಹೊಮ್ಮಿಸುವ ಈ ಕವನವನ್ನು ವಿಶ್ಲೇಷಿಸುವುದಕ್ಕಿಂತ ಪೂರ್ತಿ ಓದುವುದೇ ಒಳ್ಳೆಯದು. ಸರಳವಾಗಿದ್ದೂ ಸಂಕೀರ್ಣ ಅನುಭವವುಂಟುಮಾಡುವ ಈ ಕವನದ ಕೆಲವು ಸಾಲುಗಳಿವು:

ಬೆಳಗಾಗ ಪೂರ್ತಿ ಎದ್ದಿರಲಿಲ್ಲ ನಾನು,
ಪತ್ರಿಕೆಯ ಹುಡುಗ ಬಂದಿದ್ದ, ನನಗೊಂದು ಸುದ್ದಿ ತಂದಿದ್ದ.